**ಶ್ರೀ ಬಿ.ಎಸ್ ಯಡಿಯೂರಪ್ಪ:** ನಿಮ್ಮ ಕಾಲದಲ್ಲಿ ಲೂಟಿಯಾಯಿತು. ಹೌದು. ಹೀಗೆ ಹೇಳಿದರೆ ನಿಮಗೇನು ತೊಂದರೆಯಾಗುತ್ತದೆ? ನಾನು ಹೀಗೆಯೇ ಹೇಳುವುದು. ಹೀಗೆ ಹೇಳಿದರೆ ನಿನಗೇನು ತೊಂದರೆಯಾಗುತ್ತದೆ? ನನಗೆ ಇತಿಮಿತಿಗಳ ಬಗ್ಗೆ ಗೊತ್ತಿದೆ. ಈ ರಾಜ್ಯದ ಜನತೆಗೆ ಲೂಟಿ ಮಾಡಿರುವವರು ಯಾರು ಎಂದು ಗೊತ್ತಿದೆ. ಉತ್ತರವನ್ನು ಕೊಡುವುದಕ್ಕೂ ಬಿಡದೆ ಅಡ್ಡಿಯನ್ನು ಮಾಡುತ್ತಿದ್ದೀರಿ.

**ಶ್ರೀ ಸಿದ್ದರಾಮಯ್ಯ :** ನಿಮ್ಮ ಆಸ್ತಿ ನಮ್ಮ ಆಸ್ತಿ ಎಲ್ಲವನ್ನೂ ಸೇರಿಸಿ ಸಿಬಿಐಗೆ ಕೊಡ್ರಿ.

**ಶ್ರೀ ಬಿ.ಎಸ್. ಯಡಿಯೂರಪ್ಪ :** ಯಾರಿಗೆ ಕೊಡಬೇಕೆಂಬುದರ ಬಗ್ಗೆ ಆಮೇಲೆ ತೀರ್ಮಾನವನ್ನು ಮಾಡೋಣ. ನಾನು ಉತ್ತರವನ್ನು ಕೊಡುವವರೆಗೂ ತಾವು ಕುಳಿತುಕೊಳ್ಳಿ.

**ಶ್ರೀ ಡಿ.ಕೆ. ಶಿವಕುಮಾರ್ :** ತಾವು ಹುಡುಗಾಟವನ್ನು ಆಡುತ್ತೀರಾ, ಕುಸ್ತಿಯನ್ನು ಮಾಡುತ್ತೀರಾ? ಮಾನ್ಯ ಅಧ್ಯಕ್ಷರೆ,..

(ಈ ಹಂತದಲ್ಲಿ ವಿರೋಧಪಕ್ಷದ ನಾಯಕರು ಹಾಗೂ ಕಾಂಗ್ರೆಸ್ ಪಕ್ಷದ ಸದಸ್ಯರು ಸದನದ ಬಾವಿಗೆ ಬಂದರು)

**ಶ್ರೀ ಬಿ.ಎಸ್. ಯಡಿಯೂರಪ್ಪ :** ಆಯಿತಪ್ಪಾ, ಕ್ಷಮಿಸಪ್ಪಾ, ನಿಮ್ಮಲ್ಲಿ ಕ್ಷಮೆ ಕೇಳುತ್ತೇನೆ. ತಾವು ನಡೆಯಿರಿ. ಆಯಿತು ದಯಮಾಡಿ ಕ್ಷಮಿಸಿ.

(ಗೊಂದಲ)

**ಶ್ರೀ ಬಿ.ಎಸ್. ಯಡಿಯೂರಪ್ಪ :** ಆಯಿತಪ್ಪಾ, ನನ್ನಿಂದ ತಪ್ಪಾಗಿದೆ ಹೋಗಿ ತಾವು ಕುಳಿತುಕೊಳ್ಳಿ. ಆಯಿತು ಕ್ಷಮಿಸಿರಿ.

(ಗೊಂದಲ)

**ಅಧ್ಯಕ್ಷರು** : ಮಾನ್ಯ ಮುಖ್ಯಮಂತ್ರಿಗಳು ತಪ್ಪಾಯಿತು ಎಂದು ಹೇಳಿದ್ದಾರಲ್ಲಾ,

(ಸದನದ ಬಾವಿಯಿಂದಲೇ ಕಾಂಗ್ರೆಸ್ ಪಕ್ಷದ ಸದಸ್ಯರು ಮಾತನಾಡುತ್ತಿದ್ದರು)

**ಶ್ರೀ ಬಿ.ಎಸ್. ಯಡಿಯೂರಪ್ಪ** : ನಾನು ಏನೋ ಆವೇಶದಲ್ಲಿ ಮಾತನಾಡಿದ್ದೇನೆ, ನಾನು ಕ್ಷಮೆಯನ್ನು ಕೇಳುತ್ತೇನೆ, ತಾವೆಲ್ಲರೂ ಹೋಗಿ ಕುಳಿತುಕೊಳ್ಳಿ.

(ಸದನದ ಬಾವಿಯಿಂದಲೇ ಮಾನ್ಯ ಸಿದ್ದರಾಮಯ್ಯನವರು, ಮಾತನಾಡುತ್ತಿದ್ದರು.)

(ಗೊಂದಲ)

**ಶ್ರೀ ಬಿ.ಎಸ್. ಯಡಿಯೂರಪ್ಪ** : ಆಯಿತಪ್ಪಾ, ನಾನು ಕ್ಷಮೆಯನ್ನು ಕೇಳುತ್ತಿದ್ದೇನೆ. ತಾವು ನಡೆಯಿರಿ.

**ಅಧ್ಯಕ್ಷರು** : ಮಾನ್ಯ ಮುಖ್ಯಮಂತ್ರಿಗಳು ಕ್ಷಮೆಯನ್ನು ಕೇಳಿದ್ದಾರೆ, ತಾವುಗಳು ತಮ್ಮಗಳ ಸ್ಥಾನಗಳಿಗೆ ಹೋಗಿ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ನಾನು ಕ್ಷಮೆಯನ್ನು ಕೇಳುತ್ತಿದ್ದೇನೆ. ನಡೆಯಿರಿ.

**ಅಧ್ಯಕ್ಷರು** : ಅವರು ಕ್ಷಮೆಯನ್ನು ಕೇಳಿದ್ದಾರೆ. ತಾವೆಲ್ಲರೂ ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಿ.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಸದನದ ಬಾವಿಯಿಂದ ಹೋಗಿ ತಮ್ಮ ಸ್ಥಾನಗಳಿಗೆ ತೆರಳಿದರು)

(ಗೊಂದಲ)